MVC No. 229/2023 - -

RW - 1

ದಿನಾಂಕಃ 17.06.2026 ರಂದು ಸಾಕ್ಷಿಗೆ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ 2 ನೇ ಎದುರುದಾರರ ಪರ ವಕೀಲರಿಂದ -

ನಾನು ನನ್ನ ಮುಖ್ಯ ವಿಚಾರಣೆಯಾಗಿ ಶಪಥ ಪತ್ರವನ್ನು ಹಾಜರುಪಡಿಸಿರುತ್ತೇನೆ. ಶಪಥ ಪತ್ರದಲ್ಲಿ ಬರೆದಿರುವುದನ್ನು ನಾನು ಹೇಳಿ ಬರೆಯಿಸಿದ್ದು, ಬರೆದ ನಂತರ ಅದನ್ನು ನನಗೆ ಓದಿ ಹೇಳಿದ್ದು ನಂತರ ಸಹಿ ಮಾಡಿರುತ್ತೇನೆ. ನನ್ನ ಶಪಥ ಪತ್ರದಲ್ಲಿ ಬರೆದಿರುವುದು ಎಲ್ಲಾ ಸತ್ಯವಾಗಿರುತ್ತದೆ.

ಅಧಿಕಾರ ಪತ್ರವನ್ನು ನಿಆರ್-4 ಎಂದು, ವಿಮಾ ಪಾಲಿಸಿಯನ್ನು ನಿಆರ್-5 ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ಅರ್ಜಿದಾರರ ಪರ ವಕೀಲರಿಂದ -

ವಿಮಾ ಸೌಲಭ್ಯ ಮಾಡಬೇಕಾದರೆ ಮಾಲೀಕರಿಗೆ ಷರತ್ತುಗಳನ್ನು ವಿದಿಸಿದ್ದಾರೆ ಎಂದರೆ ಸರಿ. ಅಪಘಾತವಾದ ಸಮಯದಲ್ಲಿ ಅಪಘಾತಪಡಿಸಿದ ಕಾರು ನಮ್ಮ ಕಂಪನಿಯಲ್ಲಿ ವಿಮಾ ಸೌಲಭ್ಯ ಪಡೆದಿತ್ತು ಹಾಗೂ ಅದು ಚಾಲ್ತಿಯಲ್ಲಿತ್ತು ಎಂದರೆ ಸರಿ. ಸಾಕ್ಷಿ ಮುಂದುವರೆದು ಷರತ್ತುಗಳಿಗೆ ಒಳಪಟ್ಟು ಎಂದು ನುಡಿಯುತ್ತಾರೆ. ಅಪಘಾತಪಡಿಸಿದ ಕಾರು ನಮ್ಮ ಕಂಪನಿಯಲ್ಲಿ ವಿಮಾ ಸೌಲಭ್ಯ ಹೊಂದಿದ್ದ ಕಾರಣ ಅರ್ಜಿದಾರರಿಗೆ ನಾವು ಪರಿಹಾರ ನೀಡಲು ಬಾಧ್ಯರಿದ್ದೇವೆ ಎಂದರೆ ಸರಿಯಲ್ಲ. ಸದರಿ ಷರತ್ತುಗಳು ವಾಹನದ ಮಾಲೀಕರು ಹಾಗೂ ನಮ್ಮ ನಡುವೆ ಆಗಿರುತ್ತದೆ ಎಂದರೆ ಸರಿಯಲ್ಲ. ಅರ್ಜಿದಾರರು ಹಾಗೂ ನಮ್ಮ ನಡುವೆ ಯೂವುದೇ ಷರತ್ತುಗ್ಗಳು ಇರುವುದಿಲ್ಲ ಎಂದರೆ ಸರಿಯಲ್ಲ. ನಮ್ಮ ಪಾಲಿಸಿ ಪ್ರಕಾರ ಅರ್ಜಿದಾರರಿಗೆ ಪರಿಹಾರ ನೀಡಲು ನಮ್ಮ ಕಂಪನಿಯವರು ಬಾಧ್ಯರು ಎಂದರೆ ಸರಿಯಲ್ಲ. ಅರ್ಜಿದಾರರಿಗೆ ಪರಿಹಾರ ಕೊಡುವುದನ್ನು ತಪ್ಪಿಸುವ ಸಲುವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ಬಹಿರಂಗ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಿಸಲಾಯಿತು).

ಓ.ಹೇ.ಕೇ.ಸ.ಸ.ಇದೆ.

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಸಿಜೆಎಂ

ನ್ಯಾಯಾಲಯ, ದಾವಣಗೆರೆ